





ಚಿತ್ರ: ಎಸ್ಪೆಚ್

ಒಡಿಶಾ, ಪಶ್ಚಿಮ ಬಂಗಾಳದಲ್ಲಿ ಮಹಿಳೆಯರು ಬಿಳಿ ಬಣ್ಣದ ಶಂಖದ ಬಳೆಗಳನ್ನು, ಕೆಂಪು ಹವಳದ ಪೋಲಾ ಬಳೆಗಳನ್ನು ಧರಿಸಿದರೆ, ಪಂಜಾಬಿನಲ್ಲಿ ದಂತದ ಚೂಡಾ ಹಾಕಿಕೊಳ್ಳುವ ಪದ್ಧತಿಯಿದೆ. ಒಟ್ಟು 21 ಬಳೆಗಳನ್ನು ವಧುವಿಗೆ ತೊಡಿಸುವರು. ಈ ಬಳೆಗಳಿಗೆ ಸಣ್ಣ ಸಣ್ಣ ಗೆಜ್ಜೆಗಳನ್ನೂ ಅಳವಡಿಸಲಾಗುವುದು.

ದಕ್ಷಿಣ ಭಾರತದಲ್ಲಿ ಹಲವು ಕಡೆ ಹಾಗೂ ಮಹಾರಾಷ್ಟ್ರದಲ್ಲಿ ಮದುವೆ 2–3 ದಿನಗಳಿರುವಾಗ ಬಳೆಗಾರನನ್ನು ಕರೆಸಿ ಸಮಾರಂಭಕ್ಕೆ ಬಂದ ಬಂಧುಗಳು ಗಾಜಿನ ಬಳೆ ತೊಡಿಸಿಕೊಳ್ಳುವ ಸಂಪ್ರದಾಯವಿದೆ. ಈ ಸಂದರ್ಭದಲ್ಲಿ ಬಳೆಗಾರನಿಗೆ ಉಡುಗೊರೆ ಕೊಟ್ಟು ತಕ್ಕ ಮರ್ಯಾದೆ ಸಲ್ಲಿಸಲಾಗುವುದು.

ಮದುವೆ ಬಿಟ್ಟರೆ, ಹಬ್ಬಗಳ ಸಂದರ್ಭದಲ್ಲಿ ಈ ಗಾಜಿನ ಬಳೆಗಳಿಗೆ ಪ್ರಶಸ್ತ ಸ್ಥಾನವಿದೆ. ವರಮಹಾಲಕ್ಷ್ಮಿ, ಗೌರಿಹಬ್ಬ, ನವರಾತ್ರಿ ಎಂದೆಲ್ಲ ಹಬ್ಬಗಳ ಸಾಲು ಬಂದರೆ ಯುವತಿಯರು, ಮಹಿಳೆಯರು ಬಳೆ ಅಂಗಡಿಗಳಿಗೆ ದೌಡಾಯಿಸುವುದು ಸಾಮಾನ್ಯ ದೃಶ್ಯ. ಬಾಗಿನಗಳಿಗೆ, ಮನೆಗೆ ಬಂದವರಿಗೆ ಕುಂಕುಮದ ಜೊತೆ ಕೊಡಲು ಎಂದೆಲ್ಲ ಥರಾವರಿ ಬಳೆಗಳನ್ನು ನೋಡಿ, ವಿಮರ್ಶಿಸಿ, ಗಟ್ಟಿಯಿದೆಯೇ ಎಂದು ಪರೀಕ್ಷಿಸಿ ಡಝನ್‌ಗಟ್ಟಲೆ ಕೊಂಡುಕೊಂಡರೇ ಸಮಾಧಾನ.

## ಫ್ಯಾಷನ್ ಆಗಿ...

ಉದ್ಯೋಗಸ್ಥ ಹುಡುಗಿಯರು ಕಚೇರಿಯಲ್ಲಿ ಬೋಳು ಕೈ ಬಿಟ್ಟುಕೊಂಡು ಬಂದರೂ ವಿಶೇಷ ಸಮಾರಂಭಗಳಲ್ಲಿ ಉಡುಪು, ಸೀರೆಗೆ ಹೊಂದುವಂತಹ ಬಳೆಗಳನ್ನು ಧರಿಸುವುದು ಫ್ಯಾಷನ್. ಬಳೆಗಳಿಲ್ಲದೇ ಅಲಂಕಾರ ಪೂರ್ಣಗೊಳ್ಳಲಾರದು. ಮಣಿಕಟ್ಟಿನಿಂದ ಮೊಳಕೈವರೆಗೆ ವಿವಿಧ ರಂಗಿನ ಗಾಜಿನ ಬಳೆಗಳ ಜೊತೆ ಫ್ಯಾಷನ್ ಬಳೆಗಳೂ ಸ್ಥಾನ ಗಿಟ್ಟಿಸಿವೆ.

ಸರಳವಾದ ಚನ್ನಪಟ್ಟಣದ ಬಣ್ಣಬಣ್ಣದ ಮರದ ಬಳೆಗಳು, ಅರಗಿನಿಂದ ಮಾಡಿದ ಚಿತ್ತಾರದ ಬಳೆಗಳು ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟದಲ್ಲಿ ಸಾಮಾನ್ಯವಾಗಿ ಕಾಣುತ್ತವೆ. ಇವು ಪಾಶ್ಚಿಮಾತ್ಯ ಉಡುಪಿಗೂ ಚೆನ್ನಾಗಿ ಕಾಣುತ್ತವೆ. ಇವುಗಳಲ್ಲಿ ವೃತ್ತಾಕಾರದ ಬಳೆಗಳಷ್ಟೇ ಅಲ್ಲ, ಚಚ್ಚೌಕದ, ತಿರುವು ಇರುವ ಬಳೆಗಳು ಆಧುನಿಕ ಉಡುಪಿಗೆ ಹೇಳಿಮಾಡಿಸಿದಂತಹವು. ಹಾಗೆಯೇ ಲೋಹದ ಮೇಲೆ ಹ್ಯಾಂಡ್‌ಪೇಂಟ್ ಮಾಡಿದ ಬಳೆಗಳು ಎಥ್ನಿಕ್ ಉಡುಪಿಗೆ ಹೊಂದುವಂತಿರುತ್ತವೆ.

ಇನ್ನು ಮಣಿಗಳಿಂದ ಮಾಡಿದ ಬ್ರೇಸ್‌ಲೆಟ್‌ನಂತಹ ಬಳೆಗಳು ಸರದ ಜೊತೆ ಹೊಂದುತ್ತವೆ. ಅರೆ ಅಮೂಲ್ಯ ಹರಳುಗಳಾದ ಜೇಡ್, ಓನಿಕ್ಸ್ ಮೊದಲಾದವುಗಳನ್ನು ಇದರಲ್ಲಿ ಬಳಸಲಾಗುವುದು. ಥ್ರೆಡ್‌ನಿಂದ ಮಾಡಿದ ಬಳೆಗಳು ಈಗಿನ ಟ್ರೆಂಡ್. ಲೋಹಕ್ಕೆ ಅಥವಾ ಮರದ ಬಳೆಗಳಿಗೆ ಬಣ್ಣದ ನೂಲನ್ನು ಸುತ್ತಿ ಮಾಡಿದ ಈ ಬಳೆಗಳನ್ನು ಒಂದಕ್ಕಿಂತ ಜಾಸ್ತಿ ಹಾಕಿಕೊಂಡರೆ ಚೆನ್ನಾಗಿ ಕಾಣುತ್ತದೆ.

ಈಗಂತೂ ಚೀನಾದಿಂದ ಆಮದಾದ ಪ್ಲಾಸ್ಟಿಕ್ ಬಳೆಗಳೂ ಲಭ್ಯ. ಅಗಲವಾದ, ನಕ್ಷೆಗಳನ್ನು ಕೂರಿಸಿದ ಈ ಬಳೆಗಳಿಗೆ ಬಳಿದ ಬಣ್ಣ ಕೆಲವರಿಗೆ ಅಲರ್ಜಿಯಾಗಿ ಕಾಡುವುದರಿಂದ ಧರಿಸುವ ಮೊದಲು ಎಚ್ಚರಿಕೆ ಅಗತ್ಯ.

ಎಷ್ಟೆಲ್ಲಾ ಫ್ಯಾಷನ್‌ಗಳು ಬಂದು ಹೋಗಿವೆ. ಆದರೆ ಕಣ ಕಣ ಎಂದು ಕಲರವ ಹೊರಡಿಸುವ, ಕತ್ತಲೆಯಲ್ಲಿ ನಡೆದರೂ ಗುಟ್ಟು ಬಿಟ್ಟುಕೊಡುವ ಗಾಜಿನ ಬಳೆಗಳ ಸಂಪ್ರದಾಯ ಮಾತ್ರ ಯಾವತ್ತೂ ನಶಿಸಲಾರದು. ಜಯಾ, ಮಾಧುರಿ, ಐಶ್ವರ್ಯ, ಮಾಲಾಶ್ರೀ, ದೀಪಿಕಾ.. ಎಂದೆಲ್ಲ ಜನಪ್ರಿಯ ಸಿನಿಮಾ ತಾರೆಯರ ಹೆಸರು ಇಟ್ಟು ಬಳೆ ಮಾರುವ ಅಂಗಡಿಗಳಿಗೂ ಬರವಿಲ್ಲ. ■




# ವಶೀಕರಣದಲ್ಲಿ ಚಾಲೆಂಜ್

**ಪಂಡಿತ್ ಶ್ರೀ ಮಹೇಶ್‌ಭಟ್**

ಪುರಾತನ ಮಂಗೋಲಿ, ಸಿಂಹಳಿ, ಕೇರಳದ ತಾಳೆಗ್ರಂಥದ ಶಾಸ್ತ್ರೀಯ ಮಂತ್ರ ವಿದ್ಯೆ ದೇವಿ ಉಪಾಸನ ಶಕ್ತಿ ಯಜ್ಞಗಳ ಕಠೋರ ಸಾಧನೆಯಿಂದ ಅದ್ಭುತ 18 ಸಾವಿರ ಅತೀಂದ್ರೀಯ ದೇವಿಮಂತ್ರ ಶಕ್ತಿಗಳನ್ನು ಸಿದ್ಧಿಪಡಿಸಿಕೊಂಡಿರುವ ಇವರು ಪಡೆದ ಆರನೇ ಶಕ್ತಿಯಿಂದ ನಿಮ್ಮ ಭವಿಷ್ಯ ವ್ಯಾಪಾರ, ವಶೀಕರಣ, ಶತ್ರು ಪೀಡೆ, ಮದುವೆ, ಸಂತಾನ, ಆರ್ಥಿಕ ಉದ್ಯೋಗ, ದಾಂಪತ್ಯ ಕಲಹ, ವಿದ್ಯೆ, ಮಾಟಮಂತ್ರ, ಇನ್ನೂ ಯಾವುದೇ ಕಠಿಣ ಸಮಸ್ಯೆಗಳಿಗೆ ಪರಿಹಾರ ಶತಸಿದ್ಧ

ಶ್ರೀ ರಾಘವೇಂದ್ರ ಸ್ವಾಮಿಯ ಉಪಾಸನಾ ಶಕ್ತಿಯಿಂದ ಕಠೋರ ಯಜ್ಞಗಳ ಮೂಲಕ ಬಲಿಷ್ಠ ಪೂಜೆಗಳಿಂದ ಪ್ರಾಚೀನ ಗಿಡಮೂಲಿಕೆಯಿಂದ ತಯಾರಿಸಲಾದ ಅದ್ಭುತ ಯಂತ್ರಗಳಿಂದ ಆರೋಗ್ಯ, ಸಂಪತ್ತು, ಮನಃಶಾಂತಿ, ಸತಿಪತಿ ಕಲಹ, ಶತ್ರು, ದುಷ್ಟ ನಿವಾರಣೆ, ಲಕ್ಷ್ಮೀ ವಶೀಕರಣ, ವಿವಾಹಕ್ಕೆ, ಸಂತಾನ ಭಾಗ್ಯಕ್ಕೆ ಅದ್ಭುತ ಶ್ರೀ ಸೌಭಾಗ್ಯಯಂತ್ರ ಚಕ್ರಗಳು ತಯಾರಿಸಿಕೊಡಲಾಗುತ್ತದೆ.

ನಮ್ಮಲ್ಲಿ ಕೇಳುವ ನಿಮ್ಮ ಯಾವುದೇ ಸಮಸ್ಯೆಗಳನ್ನು ಗುಪ್ತವಾಗಿಡಲಾಗುವುದು.

ನಾಗಸಾಧು ಆದಿವಾಸಿ ಗುರುಗಳ ಬಳಿ ಸತತ 25 ವರ್ಷಗಳ ಯಂತ್ರಮಂತ್ರ ಸರ್ವವಿದ್ಯೆ ಸಿದ್ಧಿ ಪಡೆದುಕೊಂಡಿರುತ್ತಾರೆ. ಸಿಂಹಳಿ ಕೇರಳ ಪದ್ಧತಿಯಿಂದ ವ್ಯಾಪಾರ ಆರ್ಥಿಕ ಅಭಿವೃದ್ಧಿಗೆ ಕುಬೇರ ಬಂಧಿ ಯಂತ್ರ ಮತ್ತು ಸುದರ್ಶನ ಚಕ್ರ ನೆರವೇರಿಸಿ ಕೊಡಲಾಗುತ್ತದೆ. ಮಂಗೋಲಿ, ಸಿಂಹಳಿ ಮಾಂತ್ರಿಕ ಶಕ್ತಿಯಿಂದ ವಶೀಕರಣ, ಸರ್ವ ಜನ ವಶೀಕರಣ ನೆರವೇರಿಸಿಕೊಡುತ್ತಾರೆ.

ಮನೆ ವಿಳಾಸ: ಶ್ರೀ ರಾಘವೇಂದ್ರಸ್ವಾಮಿ ಜ್ಯೋತಿಷ್ಯಂ, ನಂ. 15, 1ನೇ ಮೇನ್, 1ನೇ ಕ್ರಾಸ್, ಅಯ್ಯಣ್ಣಶೆಟ್ಟಿ ಲೇಔಟ್, ಕ.ವಿ.ಕಾ. ಕಾರ್ಖಾನೆ ಎದುರು, ಮೈಸೂರು ರಸ್ತೆ, ಬ್ಯಾಟರಾಯನಪುರ, ಬೆಂಗಳೂರು

**9900933963**

Download Play store app.astroguruji Google play visit our webpage: www.astroguruji.net